ಕ್ರ. ಸಂ.	ಕಂಪನಿಯ ಹೆಸರು	ಹುದ್ದೆಗಳ ಸಂಖ್ಯೆ
1	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿ.	502
2	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿ.	429
3	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿ.	400
4	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿ.	274
5	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿ.	750
	ಒಟ್ಟು	**2355**

ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ವಿದ್ಯುತ್ ಸರಬರಾಜು ಕಂಪನಿಗಳು ಹಾಲಿ ಖಾಲಿ ಇರುವ ಲೈನ್‌ಮನ್/ಸಹಾಯಕ ಲೈನ್‌ಮನ್ ಹುದ್ದೆಗಳನ್ನು ತುಂಬುವ ಕಾರ್ಯವನ್ನು ಕೈಗೊಳ್ಳಲಿವೆ.

5304 (5961) ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ): ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರಾಜೀವ್ ಗಾಂಧಿ ಯುವಶಕ್ತಿ ಸಂಘಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಕೊಟ್ಟಿರುವ ಅನುದಾನದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು);

ಇ) ಈ ಸಂಘಗಳು ಯಾವ ನಿಯಮದ ಪ್ರಕಾರ ಸ್ಥಾಪನೆಗೊಂಡಿವೆ;

ಈ) ಈ ಸಂಘಗಳ ಉದ್ದೇಶಿತ ಕಾರ್ಯಕ್ರಮಗಳೇನು?

ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ (ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 7872 ರಾಜೀವ್ ಗಾಂಧಿ ಯುವಶಕ್ತಿ ಸಂಘಗಳು ಅಸ್ಥಿತ್ವದಲ್ಲಿರುತ್ತವೆ. ಅವುಗಳ ಜಿಲ್ಲಾವಾರು ವಿವರ ಈ ರೀತಿ ಇದೆ.

ಕ್ರ.ಸಂ.	ಜಿಲ್ಲೆ	ಒಟ್ಟು ಸಂಘಗಳು
1	2	3
1	ಬೆಂಗಳೂರು ನಗರ	656
2	ಬೆಂಗಳೂರು ಗ್ರಾಮಾಂತರ	301
3	ಕೋಲಾರ	441
4	ತುಮಕೂರು	388

1	2	3
5	ಶಿವಮೊಗ್ಗ	354
6	ಚಿತ್ರದುರ್ಗ	212
7	ದಾವಣಗೆರೆ	290
8	ಮೈಸೂರು	384
9	ಮಂಡ್ಯ	287
10	ಚಿಕ್ಕಮಗಳೂರು	236
11	ಹಾಸನ	325
12	ಮಂಗಳೂರು	277
13	ಮಡಿಕೇರಿ	108
14	ಬೆಳಗಾಂ	607
15	ಧಾರವಾಡ	277
16	ಬಿಜಾಪುರ	248
17	ಕಾರವಾರ	269
18	ಗುಲ್ಬರ್ಗಾ	498
19	ಬೀದರ್	170
20	ಬಳ್ಳಾರಿ	259
21	ರಾಯಚೂರು	149
22	ಚಾಮರಾಜನಗರ	146
23	ಗದಗ	163
24	ಉಡುಪಿ	190
25	ಬಾಗಲಕೋಟೆ	233
26	ಹಾವೇರಿ	244
27	ಕೊಪ್ಪಳ	160
	ಒಟ್ಟು	**7872**

ಆ) ರಾಜೀವ್ ಗಾಂಧಿ ಯುವಶಕ್ತಿ ಸಂಘ ಯೋಜನೆಯನ್ನು 2003–04ನೇ ಸಾಲಿನಿಂದ ಜಾರಿಗೊಳಿಸಿದ್ದು. ಈ ಯೋಜನೆಗೆ ಒದಗಿಸಿರುವ ರೂ. 6.36 ಕೋಟಿಗಳಲ್ಲಿ ಯುವಶಕ್ತಿ ಸಂಘಗಳಿಂದ ರೂ. 5,65,90,000/–ಗಳನ್ನು ಬಿಡುಗಡೆ ಮಾಡಲಾಗಿದ್ದು, ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

ಜಿಲ್ಲೆ	ನೆರವು	ಮೊತ್ತ
ಬೆಂಗಳೂರು	112	ರೂ.11,20,000/–
ಬೆಂಗಳೂರು	228	ರೂ.22,80,000/–
ಕೋಲಾರ	307	ರೂ.30,70,000/–

1	2	3
ತುಮಕೂರು	321	ರೂ.32,10,000/–
ಶಿವಮೊಗ್ಗ	260	ರೂ.26,00,000/–
ಚಿತ್ರದುರ್ಗ	185	ರೂ.18,50,000/–
ದಾವಣಗೆರೆ	230	ರೂ.23,00,000/–
ಮೈಸೂರು	235	ರೂ.23,50,000/–
ಮಂಡ್ಯ	232	ರೂ.23,20,000/–
ಚಿಕ್ಕಮಗಳೂರು	226	ರೂ.22,60,000/–
ಹಾಸನ	258	ರೂ.25,80,000/–
ಮಂಗಳೂರು	203	ರೂ.20,30,000/–
ಮಡಿಕೇರಿ	98	ರೂ.9,80,000/–
ಬೆಳಗಾಂ	485	ರೂ.48,50,000/–
ಧಾರವಾಡ	127	ರೂ.12,70,000/–
ಬಿಜಾಪುರ	201	ರೂ.20,10,000/–
ಕಾರವಾರ	208	ರೂ.2080,000/–
ಗುಲ್ಬರ್ಗಾ	338	ರೂ.33,80,000/–
ಬೀದರ್	175	ರೂ.1,50,000/–
ಬಳ್ಳಾರಿ	191	ರೂ.1910,000/–
ರಾಯಚೂರು	166	ರೂ.16,60,000/–
ಚಾಮರಾಜನಗರ	121	ರೂ.12,10,000/–
ಗದಗ	106	ರೂ.10,60,000/–
ಉಡುಪಿ	143	ರೂ.14,30,000/–
ಬಾಗಲಕೋಟೆ	163	ರೂ.16,30,000/–
ಕೊಪ್ಪಳ	134	ರೂ.13,40,000/–
ಹಾವೇರಿ	206	ರೂ.20,60,000/-
ಒಟ್ಟು	**5659**	**ರೂ.5,65,90,000/-**

ಇ) 2003–04ನೇ ಸಾಲಿನ ಮಾನ್ಯಮಂತ್ರಿಯವರ ಆಯವ್ಯಯ ಭಾಷಣದನ್ವಯ 5659 ಗ್ರಾಮ ಪಂಚಾಯ್ತಿಗಳಲ್ಲಿ ಯುವಶಕ್ತಿ ಸಂಘಗಳನ್ನು ರಚಿಸುವ ನೂತನ ಯೋಜನೆಯನ್ನು ಘೋಷಿಸಲಾಗಿತ್ತು. ಅದರಂತೆ ರಾಜೀವ್‌ಗಾಂಧಿ ಯುವಶಕ್ತಿ ಸಂಘದ ರಚನೆ. ಈ ಸಂಘಗಳ ಮೂಲಕ ಯುವಜನಾಂಗದ ಕ್ರೀಡಾಭಿವೃದ್ಧಿಗೆ ಸಾಂಸ್ಕೃತಿಕ, ಸಮುದಾಯ ಅಭಿವೃದ್ಧಿ, ಶೈಕ್ಷಣಿಕ, ಸಾಮಾಜಿಕ ಮತ್ತು ವ್ಯಕ್ತಿತ್ವ ವಿಕಸನ ಹಾಗೂ ಕ್ರೀಡಾರ್ಜನೆಗೆ ಅರಿವು ಮೂಡಿಸುವ ಉದ್ದೇಶ ಹೊಂದಿದ್ದು, ಪ್ರತಿ ಸಂಘದ ರಚನೆಗೆ ರೂ.10,000/–ಗಳ ಅನುದಾನ ನೀಡಲಾಗುವುದು.

ರಾಜೀವ್‌ಗಾಂಧಿ ಯುವಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲು ಉಸ್ತುವಾರಿಯಾಗಿ ತಾಲ್ಲೂಕು ಮಟ್ಟದ ಸಮಿತಿಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಆದೇಶದಂತೆ ಸಮಿತಿಗಳನ್ನು ಸಚಿವ ಸಮಿತಿಯ ಶಿಫಾರಸ್ಸಿನಂತೆ ಹಾಗೂ ಯೋಜನೆಯ ವ್ಯಾಪ್ತಿ ಮತ್ತು ನಿಯಮಾವಳಿಗಳನ್ನೂ ಸಹ ರಚಿಸಲಾಗಿದೆ.

5305 (6153) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ): ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಮತ್ತು ಮೈಸೂರು ನಡುವೆ ಹಾಲಿ ನಿರ್ಮಿಸುತ್ತಿರುವ ಜೋಡಿ ರಸ್ತೆಯ ನಿರ್ಮಾಣ ಕಾರ್ಯ ಪ್ರಾರಂಭಿಸಿದ್ದು ಯಾವಾಗ;

ಆ) ಈ ರಸ್ತೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ್ದ ಅವಧಿಯ ವಿವರ ನೀಡುವುದು; ಅವಧಿಗೆ ಮುನ್ನವೇ ನಿರ್ಮಾಣ ಕಾರ್ಯವನ್ನು ಪೂರ್ಣ ಗೊಳಿಸಲಾಗಿದೆಯೇ;

ಇ) ಈ ರಸ್ತೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ್ದ ಅವಧಿಯ ವಿವರ ನೀಡುವುದು; ಅವಧಿಗೆ ಮುನ್ನವೇ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗಿದೆಯೇ;

ಈ) ಈ ರಸ್ತೆ ನಿರ್ಮಾಣ ಕಾರ್ಯವನ್ನು ಈಗ ಎಷ್ಟು ಪೂರ್ಣ ಗೊಳಿಸಲಾಗಿದೆ (ಇನ್ನೂ ಬಾಕಿ ಇರುವ ನಿರ್ಮಾಣ ಕಾರ್ಯದ ವಿವಿರ ನೀಡುವುದು);

ಉ) ಈ ರಸ್ತೆ ನಿರ್ಮಾಣ ಕಾರ್ಯವನ್ನು ಇನ್ನೂ ಎಷ್ಟು ಸಮಯದಲ್ಲಿ ಪೂರ್ಣಗೊಳಿಸಲಾಗುವುದು.

ಶ್ರೀ ಹೆಚ್.ಡಿ.ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೆಂಗಳೂರು–ಮೈಸೂರು ನಡುವೆ ನಿರ್ಮಿಸುತ್ತಿರುವ ನಾಲ್ಕು ಪಥದ ರಸ್ತೆಯ ನಿರ್ಮಾಣವನ್ನು ಎರಡು ಪ್ಯಾಕೇಜುಗಳಲ್ಲಿ ತೆಗೆದುಕೊಳ್ಳಲಾಗಿದೆ.

1) ಬೆಂಗಳೂರಿನಿಂದ–ಮದ್ದೂರಿನವರೆಗೆ

2) ಮದ್ದೂರಿನಿಂದ–ಮೈಸೂರಿನವರೆಗೆ

ಈ ಎರಡು ಪ್ಯಾಕೇಜಿನ ಕಾಮಗಾರಿಗಳನ್ನು ಮಾರ್ಚ್ 2004ರಲ್ಲಿ ಪ್ರಾರಂಭಿಸಲಾಗಿದೆ.

ಆ) ಬೆಂಗಳೂರಿನಿಂದ–ಮದ್ದೂರಿನವರೆಗಿನ ಪ್ಯಾಕೇಜ್–1 ರ ನಿರ್ಮಾಣ ಕಾರ್ಯವನ್ನು ಮೆ:ಬ್ಯಂದಾವನ ಇನ್‌ಫ್ರಾಸ್ಟ್ರಕ್ಚರ್ಸ್ ಅವರಿಗೆ ಅರ್ಧವಾರ್ಷಿಕ ಮರುಪಾವತಿಯ ಆಧಾರದ ಮೇಲೆ (Annuity Basis) ವಹಿಸಿಕೊಡಲಾಗಿದೆ. ಮದ್ದೂರಿನಿಂದ ಮೈಸೂರಿನವರೆಗಿನ ಪ್ಯಾಕೇಜ್–2 ರ ಕಾಮಗಾರಿಇಯನ್ನು ಮೆ:ಸೋಮಾ ಎಂಟರ್‌ಪ್ರೈಸಸ್ ಇವರಿಗೆ ರೂ.16.20 ಕೋಟಿಗಳ ಗುತ್ತಿಗೆ ಮೊತ್ತದಲ್ಲಿ ವಹಿಸಿಕೊಡಲಾಗಿದೆ.

ಇ) ಈ ಎರಡು ಪ್ಯಾಕೇಜಿನ ಕಾಮಗಾರಿಗಳನ್ನು ಪೂರ್ತಿಗೊಳಿಸಲು ನಿಗಧಿಪಡಿಸಿದ ಗುತ್ತಿಗೆಯ ಅವಧಿಯು ಕಾಮಗಾರಿ ಪ್ರಾರಂಭಿಸಿದ ದಿನದಿಂದ 24 ತಿಂಗಳುಗಳು. ಅವಧಿಗೆ ಮುನ್ನವೇ ಕಾಮಗಾರಿಗಳನ್ನು ಪೂರ್ತಿಗೊಳಿಸಲು ಪ್ರಯತ್ನವನ್ನು ಕೂಡಾ ಮಾಡಲಾಗುತ್ತಿದೆ.

ಈ) ಬೆಂಗಳೂರು–ಮದ್ದೂರು ವರೆಗಿನ ಪ್ಯಾಕೇಜ್–1 ರ ಕಾಮಗಾರಿಯನ್ನು ಶೇ.70 ರಷ್ಟು ಪೂರ್ತಿಗೊಳಿಸಲಾಗಿದ್ದು, ಮದ್ದೂರು–ಮೈಸೂರುವರೆಗಿನ ಪ್ಯಾಕೇಜ್–2 ರ ಕಾಮಗಾರಿಯು ಶೇ.51 ರಷ್ಟು ಪೂರ್ತಿ ಗೊಂಡಿರುತ್ತದೆ.